ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday, the 12th June, 1982 Jyeista, 22, 1904 S.E.

The House met in the Assembly Chamber, Vidhana Soudha, at Nine of the Clock.

[Mr. SPEAKER (SRI K. H. RANGANATH) in the Chair]

STARRED QUESTIONS

(to which oral answers were given)

ಅಧ್ಯಕ್ಷರು.—ಪೂರ್ಣ ಕಂದಾಯ ಮಂತ್ರಿಗಳು ಪ್ರವಾಸದಲ್ಲಿರುವುದರಿಂದ ಶ್ರೀ ಎ. ರಾಮಚಂದ್ರ ಅವರ ವಿಷಯದ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Appointment of full time Chairman for B.D.A.

476. DR. H. L. THIMME GOWDA (Basavanagudi).—Will the Chief Minister be pleased to state :

(*a*) whether it has come to the notice of the Government that the working of the Bangalore Development Authority has been greatly hampered as there is no full time Chairman to head this Board for nearly more than one year ;

(*b*) whether the Government will appoint full time Chairman to the Bangalore Development Authority at an early date, so that the Board will work effectively and efficiently and thus help the needy poor people to get sites ?

SRI R. GUNDU RAO (Chief Minister).—

(*a*) No evidence of work being hampered has come to the notice of Government.

(*b*) Sri K. K. Murthy has since been appointed as Chairman of the Bangalore Development Authority *vide* Notification No. HUD 103 MNJ 81, dated 17th October 1981.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ನಾನು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಮುಂಚೆ ಒಂದು ವಿಷಯವನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಪ್ರಶ್ನೆ ಇರತಕ್ಕದ್ದು ಬಿ.ಡಿ.ಎ. ಸಂಬಂಧ ಪಟ್ಟ ಹಾಗೆ ; ಆದನ್ನು ಕಳುಹಿಸಿ ಒಂದೂವರೆ ವರ್ಷವಾಯಿತು. ಬೆಂಗಳೂರಿನಲ್ಲಿರತಕ್ಕ ಬಿ.ಡಿ.ಎ.ಯಲ್ಲಿ ಪೂರ್ಣಾವಧಿಯ ಅಧ್ಯಕ್ಷರಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರ ಕೊಡಲು ಎಷ್ಟು ತಡವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದು, ಇಂಥ ಪ್ರಶ್ನೆಗಳಿಗಾದರೂ ಜಾಗ್ರತೆ ಉತ್ತರ ಕೊಡುವಂತೆ ಸರ್ಕಾರಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಕೇಳಿದ ಪ್ರಶ್ನೆಗೆ ಉತ್ತರ ನೀಡಲು ಇಷ್ಟು ಕಾಲ ವಿಳಂಬವಾದರೆ ಅದಕ್ಕೆ ಅರ್ಥವೇ ಇರುವುದಿಲ್ಲ.

ಅಧ್ಯಕ್ಷರು.—ಉತ್ತರ ಬರುವುದು ತುಂಬ ತಡವಾಗಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್ (ನಗರಾಡಳಿತ ಸಚಿವರು ಮತ್ತು ಮುಖ್ಯಮಂತ್ರಿಗಳ ಪರವಾಗಿ).—ಸ್ವಲ್ಪ ವಿಳಂಬವಾಗಿರಬಹುದು ; ಆದರೂ ಬೇರೆ ಏನು ತೊಂದರೆ ಇಲ್ಲ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ತುಂಬ ವಿಳಂಬವಾಗಿದೆ. ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಕೆಲಸಕ್ಕೇನು ಅಡ್ಡಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದೀರಿ. ಪೂರ್ಣಾವಧಿಯ ಅಧ್ಯಕ್ಷರಿಲ್ಲದೆ ತೊಂದರೆಯಾಗಿಲ್ಲ ಅನ್ನುವುದಾದರೆ ಮತ್ತೆ ಪೂರ್ಣಾವಧಿಯ ನಾನ್-ಆಫಿಷಿಯಲ್ ಅಧ್ಯಕ್ಷರನ್ನು ನೇಮಕ ಮಾಡತಕ್ಕ ಅವಶ್ಯಕತೆಯಾದರೂ ಏನಿತ್ತು ? ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರನ್ನೇ ಅಧ್ಯಕ್ಷರನ್ನಾಗಿ ಮುಂದುವರಿಸಿದ್ದರೆ, ಇನ್ನೊಬ್ಬ ಅಧ್ಯಕ್ಷರಿಗೆ ಸಂಬಳ ಕೊಡುವುದು ತಪ್ಪುತ್ತಿತ್ತಲ್ಲ. ಆದ್ದರಿಂದ, ಇದರ ಅವಶ್ಯಕತೆಯಾದರೂ ಏನಿತ್ತು ?

ಶ್ರೀ ಧರ್ಮಸಿಂಗ್.—ಬಿ.ಡಿ.ಎ.ಯಲ್ಲಿ ಪೂರ್ಣಾವಧಿಯ ಅಧ್ಯಕ್ಷರನ್ನು ನೇಮಿಸದೆ ಏನು ತೊಂದರೆಯಾಗಿಲ್ಲವೆಂದು ಹೇಳಿದ್ದೇವೆ. ಹಿಂದಿನ ೨-೩ ವರ್ಷಗಳ ಕಾಲದಲ್ಲಿ ಸಾಕಷ್ಟು ಅವ್ಯವಹಾರ ನಡೆದದ್ದರಿಂದ ಅದನ್ನು ಎಲ್ಲ ನಮ್ಮ ಕಾಲದಲ್ಲಿ ಸರಿಪಡಿಸುವ ಸಲುವಾಗಿ ಈಗ ಪೂರ್ಣಾವಧಿಯ ಅಧ್ಯಕ್ಷರನ್ನು ತೆಗೆದುಕೊಂಡಿದ್ದೇವೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ನಮ್ಮ ಗಮನಕ್ಕೆ ಬಂದಿರುವ ಪ್ರಕಾರ ಹಿಂದಿನ ಅಧ್ಯಕ್ಷರು ಕಛೇರಿಗೆ ಹೋಗಿ ರುಜು ಹಾಕಿ ಬರುತ್ತಿದ್ದರು. ಆದರೆ ಅಕ್ವಿಜಿಷನ್ ಮಾಡತಕ್ಕದ್ದಾಗಲೀ, ಸೈಟುಗಳನ್ನು ಪಂಚತಕ್ಕದ್ದಾಗಲಿ, ಮನೆಗಳನ್ನು ಕಟ್ಟಿಸಿಕೊಡತಕ್ಕ ಕೆಲಸವನ್ನಾಗಲೀ ಯಾವುದನ್ನೂ ಅವರು ತಮ್ಮ ಗಮನಕ್ಕೆ ತೆಗೆದುಕೊಂಡು ಮಾಡಲಿಲ್ಲ. ಅದು ತೊಂದರೆಯಾಗತಕ್ಕ ಕೆಲಸ ಅಲ್ಲವೆ ? ಬರೀ ಬಂದ ಕಾಗದಗಳಿಗೆ ಉತ್ತರಿಸುವುದಷ್ಟೇ ಅವರ ಕೆಲಸವೆ ? ಬೆಂಗಳೂರು ಅಭಿವೃದ್ಧಿಯಾಗಬೇಕಾದರೆ ಏನೇನು ಕೆಲಸಗಳು ಆಗಬೇಕೋ ಅವನ್ನು ಮಾಡದಿದ್ದರೆ ಅದು ಜನರಿಗೆ ತೊಂದರೆಯಾಗತಕ್ಕ ಕೆಲಸ ಅಲ್ಲವೆ ?

ಶ್ರೀ ಧರ್ಮಸಿಂಗ್.—ಹಿಂದೆ ಬಿ.ಡಿ.ಎ.ನಲ್ಲಿ ಏನೇನು ಅವ್ಯವಹಾರಗಳು ನಡೆದಿತ್ತು ಆ ಬಗ್ಗೆ ಹೊಸದಾಗಿ ಬಂದ ಅಧ್ಯಕ್ಷರು ಸಾಕಷ್ಟು ಕ್ರಮ ತೆಗೆದುಕೊಂಡಿದ್ದಾರೆ. ಈ ೨ ವರ್ಷಗಳ ಕಾಲದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಈಗ ಕೆಲವು ಪ್ಲಾಟ್‌ಗಳನ್ನು ಕಟ್ಟುವುದಕ್ಕೆ ಪತ್ರಿಕೆಗಳಲ್ಲಿ ಪ್ರಚಾರ ಕೊಡಲಾಗಿದೆ. ಸರ್ಕಾರದಿಂದ ಈ ಪ್ರಾಧಿಕಾರದವರಿಗೆ ಏನೇನು ಅಧಿಕಾರ ಕೊಡಬೇಕೋ ಅದನ್ನು ಕೊಟ್ಟಿದ್ದೀರಾ ? ಇವರಿಗೆ ಹೆಚ್ಚು ತೊಂದರೆ ಬರುವುದು ಸಿವೆಂಟ್ ಬಗ್ಗೆ ಅವರು ಕಟ್ಟಿಸತಕ್ಕ ಪ್ಲಾಟ್‌ಗಳಿಗೆ ಬೇಕಾಗುವಷ್ಟು ಸಿವೆಂಟ್ ಒದಗಿಸಿಕೊಡುತ್ತೀರಾ ? ನನಗೆ ತಿಳಿದು ಬಂದಿರುವ ಪ್ರಕಾರ ಕೆಲವು ಕಡೆ ಜಮೀನನ್ನು ಅಕ್ವೈರ್ ಮಾಡಿ ಅಲಾಟ್ ಮಾಡಲಾಗಿದೆ. ಬಿ.ಡಿ.ಎ. ಗುಮಾಸ್ತರ ಕೈಚಳಕದಿಂದಾಗಿ ಕೆಲಸವನ್ನು ನೋಟಿಫಿಕೇಶನ್‌ನಿಂದ ಬಿಟ್ಟುಬಿಡಲಾಗಿದೆ. ಬಿ.ಡಿ.ಎ.ದಿಂದ ನಿವೇಶನ ಪಡೆದುಕೊಂಡು ಮನೆ ಕಟ್ಟಲು ಹೋದಾಗ ಜಮೀನನ್ನು ಮಾಲಿಕ ಬಂದು ಸ್ಟೇ ತಂದಿದ್ದಾನೆ. ೪-೫ ವರ್ಷದಿಂದ ದುಡ್ಡು ಕಟ್ಟಿದವನು ಮನೆ ಕಟ್ಟಲು ಹೋದಾಗ ಈ ರೀತಿ ತೊಂದರೆ ಯಾಗುತ್ತದೆ, ಅಲಾಟ್‌ಮೆಂಟನ್ನು ಸರ್ಕಾರವೇ ಉಳಿಸಿಕೊಂಡಿದೆ. ಹೀಗಾದರೆ ಅಲಾಟೀಸ್ ಗತಿಯೇನು ? ಇದನ್ನು ಬಗೆಹರಿಸಲು ಪ್ರಾಧಿಕಾರಕ್ಕೆ ಅಧಿಕಾರ ಕೊಟ್ಟು ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಿ ಬಿ.ಡಿ.ಎ. ಚೆನ್ನಾಗಿ ನಡೆಯಬೇಕಾದರೆ ಏನೇನು ಅಧಿಕಾರ ಕೊಡಬೇಕೋ ಅದನ್ನು ಕೊಡಬೇಕು ಸ್ಟೇ ಸೆಟ್ಸ್ ಕೊಡಬೇಡಿರೆಂದು ನಿರ್ಭಂದ ಹಾಕುವುದು ಸರಿಯೇ ?

ಶ್ರೀ ಧರ್ಮಸಿಂಗ್.—ಪ್ರಾಧಿಕಾರದ ಹೊಸ ಅಧ್ಯಕ್ಷರು ಹೊಸ ಫ್ಲಾಟ್ಸ್‌ಗಳನ್ನು ಕಟ್ಟುವ ಬಗ್ಗೆ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಸರ್ಕಾರದ ಸಹಕಾರದಿಂದ ಅವನ್ನು ತರುತ್ತಿದ್ದಾರೆ. ಇಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಯೋಚಿಸಿ ಪ್ರಾಧಿಕಾರಕ್ಕೆ ಎಷ್ಟು ಅಧಿಕಾರ ಕೊಡಬೇಕು ಎನ್ನುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅವ್ಯವಹಾರ ನಡೆದಿರುವ ಕಡೆ ಸರಿಪಡಿಸುವುದಕ್ಕೆ ನಿನ್ನೆ ಕೂಡಾ ಸಾರಕ್ಕಿ ಮುಂತಾದ ಕಡೆ ಹೋಗಿ ಬರಲಾಗಿದೆ.

ಶ್ರೀ ಪಿ. ರಾಮದೇವ್—೧೯೭೮ರಲ್ಲಿ ಬಿ.ಡಿ.ಎ.ಗೆ ಸಂಬಂಧಪಟ್ಟ ಒಂದು ಪ್ರಶ್ನೆಯನ್ನು ಕೇಳಿದ್ದೆ, ಆ ಬಗ್ಗೆ ೮೦ರವರೆವಿಗೂ ಉತ್ತರ ಬರಲಿಲ್ಲ. ಪ್ರತಿಸಾರಿಯೂ ಮಾಡಿಕೊಂಡು ಬರಲಾಗುತ್ತಿದೆ. ಹೀಗಾದರೆ ನಾವು ಪ್ರಶ್ನೆಗಳನ್ನು ಕೇಳುವುದು ಏತಕ್ಕೆ ? ಆ ಬಗ್ಗೆ ಯಾವ ರೀತಿ ರಕ್ಷಣೆ ಕೊಡುತ್ತೀರಾ ?

MR. SPEAKER.—I will get it verified.

ಶ್ರೀ ಪಿ. ರಾಮದೇವ್.—ಆಲ್ಲಿ ಆದ ಅವ್ಯವಹಾರವನ್ನು ಕಂಡುಹಿಡಿದು ಅದಕ್ಕೆ ದೊಡ್ಡ ಪ್ರಚಾರವನ್ನು ಕೊಟ್ಟಿರಿ. ಆ ನಂತರ ಎಷ್ಟು ಜನರನ್ನು ಪ್ರಾಸಿಕ್ಯೂಟ್ ಮಾಡಿದ್ದೀರಿ ?

ಶ್ರೀ ಧರ್ಮಸಿಂಗ್ —ಇದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಬೇಕು. ಈಗಾಗಲೇ ಎಲ್ಲೆಲ್ಲಿ ಗಮನಕ್ಕೆ ಬಂದಿದೆ ಅಲ್ಲೆಲ್ಲಾ ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ. ಪ್ರಾಧಿಕಾರದವರು ನಿರ್ಮಿಸುವ ಒಂದು ಫ್ಲಾಟ್ ಬೆಲೆ ಸುಮಾರು ಎರಡೂವರೆ ಲಕ್ಷದಿಂದ ೩ ಲಕ್ಷ ರೂಪಾಯಿಗಳಾಗುತ್ತವೆ. ಈ ರೀತಿ ಹೆಚ್ಚು ಬೆಲೆ ಕೊಟ್ಟು ಬೆಂಗಳೂರಿನ ಮಧ್ಯಮ ಹಾಗೂ ಕೆಳಮಧ್ಯಮ ಜನ ಕೊಂಡು ಅಲ್ಲಿ ವಾಸಿಸಲು ಹೋಗಲು ಕಷ್ಟ. ಆದ್ದರಿಂದ ಇಲ್ಲಿಗೆ ಹೊರಗಡೆಯಿಂದ ಬರುವ ಜನರೇ ಹೋಗಿ ವಾಸಿಸುವುದರಿಂದ ಬೆಂಗಳೂರಿನ ಜನತೆಗೆ ಮಾಡಿದ ಉಪಕಾರವಾದರೂ ಏನು ?

ಶ್ರೀ ಧರ್ಮಸಿಂಗ್.—ಬೆಂಗಳೂರಿನ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಹಾಗೂ ದೊಡ್ಡ ದೊಡ್ಡ ಕೈಗಾರಿಕೆಗಳೂ ಇಲ್ಲಿ ಸ್ಥಾಪನೆಯಾಗುತ್ತಿವೆ. ಈ ಕಾರಣದಿಂದ ಫ್ಲಾಟ್‌ಗಳನ್ನು ನಿರ್ಮಾಣ ಮಾಡಿದರೂ ಸಹಾ, ಮತ್ತೊಂದು ಕಡೆ ಹರಿಜನ ಗಿರಿಜನರಿಗಾಗಿ ಹಾಗೂ ಬಡವರಿಗಾಗಿ ೧೦ ಸಾವಿರ ಸೈಟ್‌ಗಳನ್ನು ಕೊಡಬೇಕೆಂದು, ಮಡಿವಾಳದಲ್ಲಿ ೧ ಸಾವಿರ ಸೈಟ್‌ಗಳನ್ನು ಕೊಡಬೇಕೆಂದು ಕ್ರಮ ಕೈಗೊಳ್ಳಲಾಗಿದೆ. ಬೇರೆಯವರಿಗೂ ಮನೆಗಳ ತೊಂದರೆ ಇರುವುದರಿಂದ ಅವರಿಗೂ ಕೊಡಬೇಕೆಂದು ಮಾಡುತ್ತಿದ್ದೇವೆ.

Inconvenience to the villagers by Malaprabha Project.

527. SRI G K. TAKKED (Parasgad),—Will the Minister of State for Major and Medium Irrigation be pleased to state.—

(a) whether it has come to the notice of the Government that the ryots of Savadatti, Ugaragol, Hooli, Shirasangi, Kagadal and Halakatti villages are experiencing severe hardship to go to their lands due to Malaprabha Irrigation Scheme ;

(b) if so, measures under taken by the Government to remedy this immeditely ;

(c) the period required to reconstruct these approch roads ?

SRI B.B. CHIMMANAKATTI (Minister of State for Major and Medium Irrigation).—

(a) It has come to the notice of the Government that due to lack of improvement and repairs to some of the roads in these villages, vehicular traffic has been affected.

(b) Approach roads surrounding these villages have been included in the 'Master Plan' which comes under the Malaprabha Scheme. Some roads among these have been taken up for repairs from the assistance received from the World Food Scheme.